**ಓ.ಎಸ್. ನಂ. 17 / 2016** **ಪಿ ಡಬ್ಲ್ಯೂ – 1**

**ದಿನಾಂಕಃ 12.02.2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – 1 ನೇ ಪ್ರತಿವಾದಿ ಪರ ವಕೀಲರಿಂದ**

ನಾನು ಹಾಜರು ಪಡಿಸಿರುವಂತಹ ದೃಢೀಕರಣಕ್ಕೆ ಸಂಬಂಧಪಟ್ಟಂತೆ ಮನೆ ನಿವೇಶನದ ಇ ಸ್ವತ್ತನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಸದರಿ ದೃಢೀಕರಣ ಪತ್ರದಲ್ಲಿ ತೋರಿಸಿರುವ ಸ್ವತ್ತಿಗೆ ಸಂಬಂಧಪಟ್ಟಂತೆ ಇ ಸ್ವತ್ತನ್ನು ಪಡೆದುಕೊಳ್ಳಲು ತೊಂದರೆ ಇರುತ್ತದೆ. ಸಾಕ್ಷಿ ಮುಂದುವರೆದು ಕಂದಾಯಕಟ್ಟಬೇಕಾಗುತ್ತದೆ ಎಂದು ನುಡಿಯುತ್ತಾರೆ. ನಾನು ಹಾಜರು ಪಡಿಸಿರುವ ದೃಢೀಕರಣ ಪತ್ರ ದಾಖಲೆಯಲ್ಲ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ದಾಖಲೆ ಹಾಜರು ಪಡಿಸದೇ ದೃಢೀಕರಣ ಪತ್ರ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದೃಢೀಕರಣ ಪತ್ರದಲ್ಲಿ ದಾಖಲೆ ಕೊಡಿ ಎಂದು ಕೇಳಿರುವುದಿಲ್ಲ ಎಂದರೆ ಸರಿ. ದೃಢೀಕರಣ ಪತ್ರದಲ್ಲಿ ಯಾವುದೇ ಚೆಕ್ಕುಬಂದಿಯ ಬಗ್ಗೆ ಪೂರ್ಣ ವಿವರ ನಮೂದಿಸಿಲ್ಲ ಎಂದರೆ ಸರಿ. ದಾಖಲೆ ಹಾಜರು ಪಡಿಸದೇ ದೃಢೀಕರಣ ಪತ್ರದ ಮೇಲೆ ಪರಿಹಾರ ಪಡೆದುಕೊಳ್ಳಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ. ದೃಢೀಕರಣ ಪತ್ರದಲ್ಲಿ ತೋರಿಸಿರುವಂತಹ ಸ್ವತ್ತಿನ ದಾಖಲೆ ಹಾಜರು ಪಡಿಸಿದರೆ ನಿಜಾಂಶ ಗೊತ್ತಾಗುತ್ತದೆ ಎಂದು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವಂತಹ ಪಹಣಿ ಪತ್ರಿಕೆಯಲ್ಲಿರುವ ಸರ್ವೆ ನಂ. 223/1 ರಲ್ಲಿ 31 ಸೆಂಟು, 222 ರಲ್ಲಿ 44 ಸೆಂಟನ್ನು ನನ್ನ ತಂದೆ ನನ್ನ ತಾಯಿಗೆ ಬರೆದುಕೊಟ್ಟಿರುತ್ತಾರೆಂದರೆ ಸಾಕ್ಷಿ ಅದರ ಬಗ್ಗೆ ನನ್ನ ಒಪ್ಪಿಗೆ ಪಡೆದುಕೊಂಡಿಲ್ಲ ಎಂದು ತಿಳಿಸಿರುತ್ತಾರೆ. ಉಳಿದ 44 ಸೆಂಟು ಜಮೀನಿಗೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. 44 ಸೆಂಟಿಗೆ ಸಂಬಂಧಪಟ್ಟಂತೆ ಸುಬ್ಬರಾಜುರವರಿಗೆ ಕ್ರಯವಾಗಿರುವ ದಾಖಲೆಯನ್ನು ಹಾಜರು ಪಡಿಸಿಲ್ಲ. ನಾನು ದಾವೆಯಲ್ಲಿ ಕೇಳಿರುವಂತಹ ಪರಿಹಾರಕ್ಕೆ ಪೂರಕವಾಗಿ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

**ಉಳಿದ ಪ್ರತಿವಾದಿಗಳು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಆನಂದ ಎಂ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.